<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.</u>

**ಸಿ.ಸಿ. ನಂ.140/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : ಅನ್ನಪೂರ್ಣ | | ಸಿ.ಡಬ್ಲ್ಯೂ : 4 |
| ಗಂಡನ ಹೆಸರು | : ವಿರುಪಾಕ್ಷ | | ಪಿ.ಡಬ್ಲ್ಯೂ : 2 |
| ವಯಸ್ಸು | : 28 ವರ್ಷ | | |
| ವೃತ್ತಿ | : ಮನೆಗೆಲಸ | | |
| ವಾಸ ಸ್ಥಳ | : ಮುದನೂರು | | |

**<u>ಸಾಕ್ಷಿಗೆ ಇಂದು ದಿನಾಂಕ:24.07.2023 ರಂದು ಪ್ರಮಾಣವಚನ ಭೋಧಿಸಲಾಯಿತು</u>**

**ಮುಖ್ಯ ವಿಚಾರಣೆ: ಸ.ಸ.ಅ.ರವರಿಂದ:**

ಚಾಸಾ-1 ನನ್ನ ತಂದೆ, ಚಾಸಾ-5 ರವರ ಪರಿಚಯ ಇದೆ. ಆರೊಪಿತರ ಪರಿಚಯ ಇದೆ. ದಿ.23.03.2019 ರಂದು ನಾನು ಮತ್ತು ನನ್ನ ತಂದೆ ಪೂಜೆ ಮಾಡಲು ಅಗ್ನಿ ಗ್ರಾಮದಲ್ಲಿರುವ ನಮ್ಮ ಮನೆಗೆ ಹೋದಾಗ ಆರೋಪಿತರು ಪೂಜೆ ಮಾಡದಂತೆ ನಮಗೆ ತಡೆಹಿಡಿದರು. ನನ್ನ ತಂದೆ ಜೊತೆ ಆರೋಪಿತರು ಜಗಳ ತೆಗೆದರು, ನಾನು ಬಿಡಿಸಲು ಹೋದಾಗ ನನ್ನನ್ನು ಹಿಡಿದು ಎಳೆದಾಡಿ ಅವಮಾನಪಡಿಸಿದರು. ನನ್ನ ಕೊರಳಿನಲ್ಲಿ ಬಂಗಾರದ ಸರ ಇತ್ತು ಆರೊಪಿತರು ಜಗ್ಗಿದ್ದರಿಂದ ಅದು ಹರಿದು ಕಳೆದುಹೋಗಿದೆ. ನನ್ನ ತಂದೆಗೆ ಆರೊಪಿತರು ದುಡಿದ್ದರಿಂದ ಆತನು ಕೆಳಗೆ ಬಿದ್ದಿದ್ದು ಆತನಿಗೆ ಕೈಗೆ ಒಳಪೆಟ್ಟಾಯಿತು. ಆರೋಪಿತರು ಬಡಿಗೆಯಿಂದ ಹೊಡೆಯಲು ಬಂದರು ಆಗ ಜನರು ಬಿಡಿಸಿದರು. ನನ್ನ ದೊಡ್ಡಪ್ಪ ಆರೊಪಿತರಿಗೆ ಮನಮಾರಿದ್ದರಿಂದ ಆ ಮನೆಯಲ್ಲಿ ನಮ್ಮ ದೇವರು ಇದ್ದಕಾರಣ ನಾವು ಪೂಜೆಮಾಡಲು ಹೋದಾಗ ಈ ಜಗಳ ಆಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)**

**ಪಾಟೀ ಸವಾಲು : ಅಭೀಯೊಜನೆ ಪರ ಸ.ಸ.ರವರಿಂದಃ**

ಆ ದಿನ ಆರೋಪಿತರು ನನಗೆ , ನನ್ನ ತಂದೆಗೆ ಕೈಯಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದು ಪ್ರಾಣಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿತರು ಆ ದಿನ ನನ್ನ ಸೀರೆ ಹಿಡಿದು ಎಳೆದು ಅವಮಾನ ಮಾಡಿದರು ಎಂದರೆ ಸರಿ. ಆಗ ಚಾಸಾ-5 ರವರ ಬಂದು ಜಗಳ ಬಿಡಿಸಿದರು ಎಂದರೆ ಸರಿ. ಆ ದಿನ ಜಗಳದಲ್ಲಿ ನನ್ನ ಬಂಗಾರದ ಮಾಂಗಲ್ಯ, ಬಂಗಾರದ ಸರ ಹಾಗೂ ಕಿವಿಯ ಓಲೆ ಕಳೆದಿರುತ್ತವೆ ಎಂದರೆ ಸರಿ. ಆ ದಿನ ನಾವು ಆಸ್ಪತ್ರೆಗೆ ಹೋಗಿದ್ದೇವು ಎಂದರೆ ಸರಿ.

**ಪಾಟೀ ಸವಾಲು : ಆರೋಪಿತರ ಪರ ಎಸ್ ಎಮ್ ಪಿ ವಕೀಲರಿಂದಃ**

ಆ ದಿನ ನಾನು ಮತ್ತು ನನ್ನ ತಂದೆ ಮಾತ್ರ ಹೋಗಿದ್ದೇವು. ನಾವು ಮುದನೂರಿನಲ್ಲಿರುತ್ತೇವೆ ಎಂದರೆ ಸರಿ. ನಾವು ಅಗ್ನಿಗೆ ಹೋದಾಗ ಬೆ.10.30 ಗಂಟೆಯಾಗಿತ್ತು. ನನ್ನ ದೊಡ್ಡಪ್ಪ ಆರೊಪಿತರಿಗೆ ಮನೆಮಾರಿದ ನಂತರ ಅವರೇ ಈ ಮನೆಯಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ಸರಿ. 2012 ರಲ್ಲಿ ಮನೆಮಾರಿದ ನಂತರ ಆರೋಪಿತರೆ ಇರುತ್ತಾರೆ ಎಂದರೆ ಸರಿ. ಈ ಮನೆಯಲ್ಲಿ ನಮಗೆ ಅರ್ಧ ಭಾಗ ಇದೆ ಎಂದು ತೋರಿಸಲು ಪೋಲಿಸರಿಗೆ ದಾಖಲೆ ಕೊಟ್ಟಿರುವುದಿಲ್ಲ.

ನನ್ನ ತಂದೆ ಆರೋಪಿತರ ವಿರುದ್ದ ಸಿವಿಲ್ ದಾವೆ ಮಾಡಿರುತ್ತಾನೆ ಎಂದರೆ ಸರಿ. ಆ ಕೇಸಿನಲ್ಲಿ ನನ್ನ ತಂದೆ ಸೋತಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಗುಲಬರ್ಗಾದಲ್ಲಿ ಕೇಸು ನಡೆದಿರುತ್ತದೆ. ನಾನು ನನ್ನ ತಂದೆ ಆ ದಿನ ಜೀಪನಲ್ಲಿ ಹೋಗಿದ್ದೇವು. ನಾವು ಅಮವಾಸ್ಯೆಗೆ ಒಮ್ಮೆ ಪೂಜೆ ಮಾಡಲು ಹೋಗುತ್ತೇವೆ. ನಾವು ಈ ಮೊದಲು ಪೂಜೆಗೆ ಹೋದಾಗ ಆರೋಪಿತರು ಅಡೆ-ತಡೆ ಮಾಡಿರುವುದಿಲ್ಲ. ಆರೋಪಿತರು ತಾವು ಖರೀದಿಸಿದ ಮನೆ ಇದ್ದರು ಸಹ ಈ ಮೊದಲು ನಮಗೆ ಏನು ಅಂದಿರುವುದಿಲ್ಲ ಎಂದರೆ ಸರಿ. ನಾವು ಹೋದಾಗ ಆರೋಪಿ-1,3 ಮತ್ತು ಗೌಡ್ಯಾ ಇದ್ದರು. ನಾವು ಮನೆಯ ಒಳಗೆ ದೀಪ ಹಚ್ಚಲು ಪ್ರಾರಂಭೀಸಿದಾಗ ಆರೋಪಿತರು ಜಗಳ ಪ್ರಾರಂಭೀಸಿದರು. ನನ್ನ ತಂದೆ ಬಾಗಿಲು ಹೊರಗೆ ಮಾತಾಡುತ್ತಾ ನಿಂತಿದ್ದರು. ಪಕ್ಕದ ಮನೆಯವರ ಜೊತೆ ಮಾತಾಡುತ್ತಾ

ನಿಂತಿದ್ದರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಆ ದಿನ ಮೊದಲು ನಮ್ಮ ಜೊತೆ ಆರೋಪಿ-3 ಜಗಳ ತೆಗೆದನು. ನನ್ನ ಜೊತೆ ಆರೋಪಿತರು ಜಗಳ ಪ್ರಾರಂಭವಾಗುವ ವೇಳೆಯಲ್ಲಿ ನನ್ನ ತಂದೆ ಅಲ್ಲಿಗೆ ಬಂದರು. ಆ ಜಗಳ ಪ್ರಾರಂಭ ವಾದ ನಂತರ ಹೆಚ್ಚು ಮಂದಿ ಸೇರಿದ್ದರು. ಆ ಎಲ್ಲಾ ಮಂದಿಯ ಹೆಸರನ್ನು ಸಾಕ್ಷಿದಾರರಾಗಿ ಬರೆಸಿರುವುದಿಲ್ಲ. ಗಂಗಬಾಯಿ ಮತ್ತು ಮಡಿವಾಳಪ್ಪ ಇವರ ಹೆಸರು ಬರೆಸಿದ್ದೇನೆ. ಇವರ ಮನೆಗಳು ಅಕ್ಕ-ಪಕ್ಕ ಇವೆ. ಆ ವೇಳೆಯಲ್ಲಿ ಬೇರೆ ಜನರು ಇದ್ದರು ಆದರೆ ನಾವು ಇವರ ಹೆಸರು ಮಾತ್ರ ಬರೆಸಿದ್ದೇವೆ.

ಆ ದಿನ ಆರೋಪಿತರು ನನಗೆ ಹಾಗೂ ನನ್ನ ತಂದೆಗೆ ಹೊಡೆದಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವಾದ ಅರ್ಧ ಗಂಟೆಯಲ್ಲಿ ಪೋಲಿಸ ಠಾಣೆಗೆ ಹೋಗಿರುತ್ತೇನೆ. ನಮ್ಮನ್ನು ಪೋಲಿಸರು ಗುಲಬರ್ಗಾದ ಜಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದಕ್ಕೂ ಪೂರ್ವದಲ್ಲಿ ಪೋಲಿಸ ಠಾಣೆಯಲ್ಲಿ ಹೇಳಿಕೆಕೊಟ್ಟು ಹೋಗಿದ್ದೇವು. ಆ ದಿನ ಯಾವುದೇ ಜಗಳವಾಗಿರುವುದಿಲ್ಲ ಆದರೆ ನಾವು ಕೇಸು ಸೋತಕಾರಣ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.  ಆ ದಿನ ಯಾವುದೇ ಜಗಳವಾಗದಿದ್ದರು ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಮನೆಯನ್ನು ಮರಳಿಪಡೆಯಬೇಕೆಂದು ಆರೋಪಿತರ ವಿರುದ್ದ ಈ ರೀತಿ ಸುಳ್ಳು ಪ್ರಕರಣ ದಾಖಲಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.